**ಓ.ಎಸ್. ನಂಃ 350/2014**

**ಡಿ.ಡಬ್ಲ್ಯೂಃ 1**

**ದಿನಾಂಕ 11.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎನ್. ವಕೀಲರಿಂದಃ**

5. ಸರ್ವೇ ನಂಬರ್ 79/3 ಮತ್ತು ಸರ್ವೇ ನಂಬರ್ 231/2 ಇವೆರಡು ಬೇರೆ ಬೇರೆ ಆಸ್ತಿಗಳಾಗಿದ್ದರು ಸಹ ಸರ್ವೇ ನಂಬರ್ 79/3 ರ ಜಮೀನನ್ನು ವಾದಿ ಖರೀದಿಸಿರುತ್ತಾರೆ ಎಂದು ಹೇಳಿ ಈ ದಾವೆಯನ್ನು ಹೂಡಿರುತ್ತಾರೆ. ನಿಪಿ.1 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ಸರ್ವೇ ನಂಬರ್ 79/3 ರ ಚೆಕ್ಕುಬಂಧಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ಸರ್ವೇ ನಂಬರ್ 79/3 ರ ಚೆಕ್ಕುಬಂಧಿಯಾಗಿರುತ್ತದೆ ಎಂದು ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸರ್ವೇ ನಂಬರ್ 79/3 ಮತ್ತು ಸರ್ವೇ ನಂಬರ್ 231/2 ಇವೆರಡು ಬೇರೆ ಬೇರೆ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಬಹುದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಸರ್ವೇ ನಂಬರ್ 231/2 ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ.1 ರಡಿಯಲ್ಲಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ಮಾರಾಟ ಮಾಡಿದ್ದರು ಸಹ ಸರ್ವೇ ನಂಬರ್‌ನ್ನು 231/2 ಎಂದು ತಪ್ಪಾಗಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.

7. ಸರ್ವೇ ನಂಬರ್ 79/3 ರ ಜಮೀನಿನ ಅಕ್ಕ-ಪಕ್ಕದಲ್ಲಿ ಸರ್ವೇ ನಂಬರ್ 231/2 ರ ಜಮೀನು ಇಲ್ಲ ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣ-ತಮ್ಮಂದಿರ ಮಧ್ಯೆ ಲಿಖಿತ ಪಾಲು ವಿಭಜನೆಯಾಗಿದೆ. ಸರ್ವೇ ನಂಬರ್ 79/3 ರ ಆಸ್ತಿಯನ್ನು ಸಹ ನಾವು ಪಾಲು ವಿಭಜನೆಯನ್ನು ಮಾಡಿಕೊಂಡಿರುತ್ತೇವೆ. ನನ್ನ ಮತ್ತು ನನ್ನ ಅಣ್ಣ-ತಮ್ಮಂದಿರ ಮಧ್ಯೆ ಆದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ತಾತ ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ವಾದಿಯ ತಂದೆಗೆ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರು ಸಹ

ನಾನು ಮೋಸದಿಂದ ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ಈಗಾಗಲೇ ವಾದಿಯ ತಂದೆಗೆ ಮಾರಾಟ ಮಾಡಿರುವ ಕಾರಣ ಅದನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಳ್ಳಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

8. ತಮ್ಮ ತಂದೆಯ ಮರಣದ ನಂತರ ನಿಪಿ.1 ರ ಕ್ರಯ ಪತ್ರದ ಪ್ರಕಾರ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡುವಂತೆ ಕೋರಿ 2 ನೇ ಪ್ರತಿವಾದಿಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ವಾದಿಯರು ಸಲ್ಲಿಸಿದ ಸದರಿ ಅರ್ಜಿಗೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಹೇಳಿ ದಿನಾಂಕ 03.07.2014 ರಂದು ಹಿಂಬರಹವನ್ನು ನೀಡಿದ್ದರು ಎಂದರೆ ಸರಿಯಲ್ಲ.

9. ಪೌತಿ ಆಧಾರದ ಮೇಲೆ ನಾನು ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿ ನನ್ನ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ನಾನು ನನ್ನ ತಂದೆ ಮತ್ತು ಚಿಕ್ಕಪ್ಪನ ಒಪ್ಪಿಗೆಯ ಮೇರೆಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಒಪ್ಪಿಗೆ ಸೂಚಿಸಲು ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯು ಎಂದಿಗೂ ಸಹ ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿ ಇರಲಿಲ್ಲ ಬದಲಾಗಿ ನನ್ನ ತಾತನಿಂದ ನೇರವಾಗಿ ನನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ.

9. ನಿಪಿ.10 ಮತ್ತು 11 ರಲ್ಲಿ ಕಾಣುತ್ತಿರುವ ಸಮಾಧಿಗಳು ವಾದಿಯರ ತಂದೆ ಮತ್ತು ತಾಯಿಯರ ಸಮಾಧಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯಲ್ಲಿ ವಾದಿಯರ ತಂದೆ ಮತ್ತು ತಾಯಿಯರ ಸಮಾಧಿಗಳು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರೇ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲದಿದ್ದರು ಸಹ ದಾವೆ

ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**